ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ


# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೪ | ಫೆಬ್ರುವರಿ ೨೦೦೫ | ಬೆಂಗಳೂರು | ಸಂಚಿಕೆ ೩

## ಜೆ. ಕೃಷ್ಣಮೂರ್ತಿ

*(ನವೆಂಬರ್ 2004ನೇ ಸಂಚಿಕೆಯಿಂದ ಮುಂದುವರೆದುದು)*



ಜೆ. ಕೃಷ್ಣಮೂರ್ತಿಯವರು ಬೆಂಗಳೂರಿನ ಲಾಲ್‌ಬಾಗಿನಲ್ಲಿ ಉಪನ್ಯಾಸ ಕೊಡುತ್ತಾರೆ ಎಂಬ ವಿಷಯ ಪತ್ರಿಕೆಗಳಲ್ಲಿ ಬಂದಿತ್ತು. ನಾನು ಶಾಲೆಗೆ ರಜೆ ಹಾಕಿ ಹೋದೆ. ಉಪನ್ಯಾಸಕ್ಕೆ ಹೋಗುವ ಮುಂಚೆ ಲಾಲ್‌ಬಾಗ್ ರಸ್ತೆಯಲ್ಲಿದ್ದ ಬೀಚಿಯವರ ಮನೆಗೆ ಹೋದೆ. ಬೀಚಿ 'ಕಿಟ್ಟಪ್ಪ, ಎ ಗ್ರೇಟ್ ಮ್ಯಾನ್ ಹ್ಯಾಸ್ ಕಮ್ ಟು ಬೆಂಗಳೂರು' ಎಂದರು 'ದೇರ್‌ಫೋರ್ ಐ ಕೇಮ್' ಎಂದೆ ನಾನು. 'ಯಾರೇಳಿ?' ಕೇಳಿದರು ಬೀಚಿ. 'ಜೆ. ಕೃಷ್ಣಮೂರ್ತಿ ಹೋಗೋಣವೇ?' ಎಂದರು. 'ಹೋಗೋಣವೇ. – ನಾನು ಬಂದಿರುವುದೇ ಅದಕ್ಕೆ' ಎಂದೆ. ಸರಿ ಇಬ್ಬರೂ ಹೊರಟೆವು.

ಲಾಲ್‌ಬಾಗಿನ ಸಿಲ್ವರ್ ಜ್ಯೂಬಿಲಿ ಹಾಲಿನ ಮುಂದೆ ಅವರ ಉಪನ್ಯಾಸ ಏರ್ಪಾಡಾಗಿತ್ತು. ನಾವು ಹೋಗುವ ಹೊತ್ತಿಗಾಗಲೇ ಸುಮಾರು ಆರೇಳು ಸಾವಿರ ಜನ ಬಂದು ಸೇರಿದ್ದರು. ಆಗ ಜೆ.ಕೆ.ಯವರ ಭಾಷಣಗಳನ್ನು ಏರ್ಪಡಿಸಲು ವಿಶಾಲ ಕಟ್ಟಡಗಳು ಬೆಂಗಳೂರಿನಲ್ಲಿ ಇರಲಿಲ್ಲ. ಜೊತೆಗೆ ಪ್ರಕೃತಿಯ ಆರಾಧಕರಾದ ಕಾರಣಕ್ಕೆ, ಕಟ್ಟಡದಲ್ಲಿ ಕುಳಿತು ಮಾತನಾಡುವುದಕ್ಕಿಂತ ಹೊರಾಂಗಣ ಪ್ರದೇಶದಲ್ಲಿಯೇ ಮಾತನಾಡುವ ಅಪೇಕ್ಷೆ ಕೃಷ್ಣಮೂರ್ತಿಯವರದ್ದು. ಆ ದಿನ ಆರೇಳು ಹೆಲಿಕ್ಯಾಪ್ಟರ್‌ಗಳು, ನೂರಾರು ಕಾರುಗಳು ಬಂದಿದ್ದವು. ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಸಾಧು ಸಂತರು, ಅವರ ವಿಚಾರಗಳ ಬಗೆಗೆ ಆಸಕ್ತಿ ಇರುವವರೆಲ್ಲ ಬಂದಿದ್ದರು.

ಅಲ್ಲಿ ಒಂದು ಎತ್ತರದ ಟೇಬಲ್ ಹಾಕಿದ್ದರು. ಒಬ್ಬ ವ್ಯಕ್ತಿ ಬಂದು 'ಯುವರ್ ಅಟೆನ್ಷನ್ ಪ್ಲೀಸ್, ಮಿ. ಕೃಷ್ಣಮೂರ್ತಿ ಇಸ್ ಗೋಯಿಂಗ್ ಟು ಅಡ್ರೆಸ್. ನೌ ಪ್ಲೀಸ್ ಮೇಕ್ ದಿ ಬೆಸ್ಟ್ ಯೂಸ್ ಆಫ್ ದಿ ಅಪರ್ಚುನಿಟಿ' ಎಂದರು. (ಉದ್ದನೆಯ ಸ್ವಾಗತ ಭಾಷಣ, ಪರಿಚಯ ರಾಶಿ ರಾಶಿ ಹಾರ ಹಾಕುವ ಕಾರ್ಯಕ್ರಮಗಳಾವುವೂ ಅಲ್ಲಿ ನಡೆಯಲಿಲ್ಲ). ಅವರು ಅಷ್ಟು ಹೇಳಿದ ಒಂದು ಸೆಕೆಂಡಿನಲ್ಲಿಯೇ ಜಿಡ್ಡು ಕೃಷ್ಣಮೂರ್ತಿ ಬಂದರು. ಎತ್ತರದ ವ್ಯಕ್ತಿತ್ವ, ನೀಳವಾದ ಮುಖ, ವಿಶಾಲವಾದ ಹಣೆ, ಹಿಂದಕ್ಕೆ ಬಾಚಿದ ಕ್ರಾಪು, ಜುಬ್ಬ, ಕಚ್ಚೆ ಪಂಚೆ, ಮತ್ತು ಪಂಪ್ ಷೂಸ್ ಹಾಕಿದ್ದರು. ಟಕ್ ಟಕ್ ಎಂದು ಹೆಜ್ಜೆಗಳನ್ನು ಕೂಡ ಅಳೆದು ಹಾಕುತ್ತಿದ್ದಾರೇನೋ ಎನ್ನುವಷ್ಟು ಕರಾರುವಾಕ್ಕಾಗಿ ನಡೆದುಕೊಂಡು ಬಂದರು. ಟೇಬಲ್‌ನ ಹತ್ತಿರ ಷೂಸ್ ಬಿಚ್ಚಿದರು. ಹತ್ತಿರವಿದ್ದ ಸ್ಟೂಲ್ ಹತ್ತಿ ಟೇಬಲ್ ಮೇಲೆ ಪದ್ಮಾಸನ ಹಾಕಿ ಕುಳಿತರು. ಹೆಗಲ ಮೇಲಿದ್ದ ಟವಲ್ ತೆಗೆದು ಮುಂದಿಟ್ಟು, ಅದರ ಮೇಲೆ ರಿಸ್ಟ್‌ವಾಚ್ ಕಳಚಿಟ್ಟರು. ನಮಗೆ ಏನೋ ಕುತೂಹಲ. ಪ್ರತಿಯೊಂದು ಕ್ರಮವನ್ನೂ ಕುತೂಹಲದಿಂದ, ಆಸಕ್ತಿಯಿಂದ ಗಮನಿಸುತ್ತಿದ್ದೆವು. ಇಡೀ ಸಭೆ ನಿಶ್ಶಬ್ದವಾಗಿತ್ತು.

ಕೃಷ್ಣಮೂರ್ತಿ ಮಾತು ಶುರು ಮಾಡಿದರು : ಉಚ್ಚ ಕಂಠದಲ್ಲಿ 'ಫ್ರೆಂಡ್ಸ್ .........' ಎಂದು ಸಭಿಕರನ್ನೆಲ್ಲ ನಿಧಾನವಾಗಿ ನೋಡಿದರು. ಹಾಗೆ ನೋಡುತ್ತಿರುವಾಗ ಅವರ ಬಲ ಭಾಗಕ್ಕೆ (ಪಶ್ಚಿಮಕ್ಕೆ) ಸೂರ್ಯಾಸ್ತವಾಗುತ್ತಿತ್ತು. ಅದನ್ನೇ ಒಂದು ಕ್ಷಣ ನೋಡಿ 'ಹೋ, ಎಷ್ಟು ಅದ್ಭುತವಾಗಿದೆ' ಎಂದು ಸೂರ್ಯನ ಕಡೆಗೆ ಕೈ ತೋರಿಸಿದರು. ಇಡೀ ಸಭೆಯ ಗಮನ ಆ ಕಡೆ ತಿರುಗಿತು. ಒಂದು ಕ್ಷಣದ ನಂತರ ಜನರೆಲ್ಲ ಸೂರ್ಯಾಸ್ತ ನೋಡುವುದನ್ನು ಬಿಟ್ಟು ಕೃಷ್ಣಮೂರ್ತಿಯವರ ಕಡೆ ತಿರುಗಿದರು. ತಕ್ಷಣ ಕೃಷ್ಣಮೂರ್ತಿ 'ಸೀ ದೇರ್. ನಾಟ್ ಹಿಯರ್' ಎಂದರು. ಅಲ್ಲಿದ್ದ ಸಭಿಕರೆಲ್ಲ ಮತ್ತೆ ಕೀಲಿಕೊಟ್ಟ ಗೊಂಬೆಯ ತರಹ ಸೂರ್ಯನ ಕಡೆಗೆ ತಿರುಗಿದರು. ಒಂದೆರಡು ನಿಮಿಷಗಳಾದ ಮೇಲೆ, (ಸೂರ್ಯಾಸ್ತ ಪೂರ್ಣಗೊಂಡ ಮೇಲೆ) ನಿಧಾನವಾಗಿ ಜೆ.ಕೆ. 'ಹೌ ಬ್ಲೆಸ್‌ಫುಲ್ ಈಟೀಸ್. ನೀವೆಲ್ಲ ಆ ಸವಿಯನ್ನು ಅನುಭವಿಸಿದಿರಾ?' ಎಂದು ಕೇಳಿದರು. ಅವರ ಮಾತಿನಲ್ಲಿ ಅಜ್ಜನಿಗೆ ಮೊಮ್ಮಕ್ಕಳ ಮೇಲಿರುವ ಪ್ರೀತಿ

**(8ನೇ ಪುಟದಲ್ಲಿ ಮುಂದುವರೆದಿದೆ)**



# ಚನ್ನೈನಲ್ಲಿ ಕೆ.ಎಫ್.ಐ ವಾರ್ಷಿಕ ಸಮಾವೇಶ 2005

ಉತ್ತರಾಯಣ ಮತ್ತೆ ಬಂದಿತ್ತು. ಚುಮು ಚುಮು ಚಳಿ ಬೆಚ್ಚನೆಯ ಬಿಸಿಲಿಗೆ ದಾರಿ ಮಾಡಿಕೊಡುವ ಕಾಲ ಬಂದಿತ್ತು. ನಿಸರ್ಗದ ಶಕ್ತಿಗಳು ತೀರ ಇತ್ತೀಚೆಗಷ್ಟೆ ವಿಶ್ವನಾಟಕದಲ್ಲಿ ತಮ್ಮ ಭಯಂಕರ, ಆಘಾತಕಾರೀ ಪಾತ್ರವನ್ನು ನಿರ್ವಹಿಸಿದ್ದವು. ಈ ಭಯ ಆಘಾತಗಳು ಮನುಷ್ಯರು ಮನುಷ್ಯರ ಬಗ್ಗೆ ವರ್ತಿಸುವ ಆಘಾತಕಾರೀ ಭಯಂಕರ ವರ್ತನೆಗಳ ನಾಟಕದಂತೆ ಇರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ನಾವು ಎಂದೂ ಕಂಡು ಕೇಳರಿಯದಷ್ಟು ಅಗಾಧ ಪ್ರಮಾಣದ ವಿನಾಶ, ನೋವು, ನರಳಾಟಗಳ ರುದ್ರನೃತ್ಯ ನಡೆದಿತ್ತು.

ದಕ್ಷಿಣ ಭಾರತದಲ್ಲಿ ಸುನಾಮಿಯ ದೈತ್ಯ ಅಲೆಗಳು ಉಂಟುಮಾಡಿದ ಸಾಮಾಜಿಕ-ಆರ್ಥಿಕ ಅಸ್ತವ್ಯಸ್ತತೆ, ತಮಿಳು ನಾಡಿನ ಪ್ರಮುಖ ಧರ್ಮಗುರುಗಳ ಬಂಧನದಿಂದ ಹುಟ್ಟಿದ ಸಾಮಾಜಿಕ-ಧಾರ್ಮಿಕ ತಳಮಳ, ತಾಂತ್ರಿಕ-ಸಾಮಾಜಿಕ ಬದಲಾವಣೆಗಳ ಕಾರಣದಿಂದ ಜಗತ್ತಿನಾದ್ಯಂತ ಪ್ರಸರಿಸುತ್ತಿರುವ ಭಯ ಮತ್ತು ಆಶಾವಾದಗಳ ಅಲೆ ಈ ಎಲ್ಲ ಹಿನ್ನೆಲೆಯಲ್ಲಿ ಚನ್ನೈ ನಗರದಲ್ಲಿ ಸೂಕ್ಷ್ಮ ಮನಸ್ಸುಗಳು ಒಟ್ಟಿಗೆ ಸೇರಿದ್ದವು. ಅಧಿಕಾರದ ಕರಿನೆರಳಿನಾಚೆ ಹೆಜ್ಜೆ ಇಟ್ಟು ಮನುಷ್ಯ ಬದುಕಿನ ಸಮಸ್ಯೆಗಳನ್ನು ಕುರಿತು ಹೊಸ ನೋಟವನ್ನು ಪಡೆಯಬಯಸುವ ಸೂಕ್ಷ್ಮ ಮನಸ್ಸುಗಳ ಸಮಾವೇಶ ನಡೆದಿತ್ತು. ಅಲ್ಲಿ ಸಮಾವೇಶಗೊಂಡಿದ್ದ ಜನರ ಸಂಖ್ಯೆ ಬಲು ದೊಡ್ಡದೇನೂ ಅಲ್ಲ. ಆದರೆ ಆ ಸಮಾವೇಶದಲ್ಲಿ ಎತ್ತಲಾದ ಪ್ರಶ್ನೆಗಳು ಈ ಭೂಮಿಯ ಆರು ಬಿಲಿಯನ್ ಮನುಷ್ಯರ ಬದುಕಿಗೂ ಸಂಬಂಧಪಟ್ಟ ಪ್ರಶ್ನೆಗಳೇ ಆಗಿದ್ದವು.

''ಅವನತಿ ಮತ್ತು ವಿನಾಶಮುಖಿಯಾದ ಜಗತ್ತಿನಲ್ಲಿ ಮನುಷ್ಯನ ಮರುಹುಟ್ಟಿನ ಸಾಧ್ಯತೆ'' ಎಂಬುದು ಈ ವರ್ಷದ ಸಮಾವೇಶದ ವಿಷಯವಾಗಿತ್ತು. ಕೃಷ್ಣಮೂರ್ತಿ ಫೌಂಡೇಶನ್‌ಗಳ ಮಾರ್ಕ್ ಲೀ, ಪಿ. ಕೃಷ್ಣ ರಾಜೇಶ್ ದಲಾಲ್, ರಾಧಾ ಬರ್ನಿಯರ್, ಕಂದಸ್ವಾಮಿ, ಅಹಲ್ಯಾಚಾರಿ ಇವರುಗಳ ಭಾಷಣ; ಶಿಕ್ಷಣ ತಜ್ಞ, ವೈದ್ಯ, ತಂತ್ರಜ್ಞರು ಮತ್ತು ಸತ್ಯಾನ್ವೇಷಕರ ಪ್ಯಾನಲ್ ಚರ್ಚೆಗಳು; ವಿವಿಧ ಭಾರತೀಯ ಭಾಷೆಗಳಲ್ಲಿ ಸಮೂಹ ಚರ್ಚೆಗಳು; ಕೃಷ್ಣಮೂರ್ತಿಯವರ ಭಾಷಣದ ವೀಡಿಯೋ ಪ್ರದರ್ಶನ ಇವುಗಳೆಲ್ಲ ಇದ್ದವು. ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸ್ಥಳೀಯ ನಾಗರಿಕರು ಮತ್ತು ಥಿಯಾಸೊಫಿಕಲ್ ಸೊಸೈಟಿ ಒದಗಿಸಿದ್ದ ವಸತಿವ್ಯವಸ್ಥೆಯನ್ನು ಬಳಸಿಕೊಂಡ ಪರಸ್ಥಳದ ಆಸಕ್ತರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಕೆ.ಎಫ್.ಐ.ನ ಹೊಸ ಮತ್ತು ಹಳೆಯ ಪ್ರಕಟಣೆಗಳ ಪ್ರದರ್ಶನವೂ ಏರ್ಪಾಡಾಗಿತ್ತು. ಓದುಗರ ಮತ್ತು ಸತ್ಯಾನ್ವೇಷಕರ ಆಸಕ್ತಿಯನ್ನು ಸೆಳೆಯಿತು.

ಇಡೀ ವಾತಾವರಣದಲ್ಲಿ ಸಹಬಾಳುವೆಯ ಭಾವ ತುಂಬಿತ್ತು. ಒಳ್ಳೆಯ ಆಹಾರ, ಬಹುಕಾಲದ ನಂತರ ಲಭ್ಯವಾದ ಹಳೆಯ ಗೆಳೆಯರ ಭೆಟ್ಟಿ, ಸ್ಥಳೀಯ ಸಂಸ್ಕೃತಿಯನ್ನು ಬಿಂಬಿಸುವ ನರ್ತನ ಮತ್ತು ಸಂಗೀತ ಕಾರ್ಯಕ್ರಮಗಳು, ಪ್ರಶಾಂತವಾದ ಶಾಲೆಯ ಆವರಣದಲ್ಲಿ ನಡೆದ ಜೆ.ಕೆ ಭಾವಚಿತ್ರಗಳ ಪ್ರದರ್ಶನ, ಶಾಲೆಯ ಶಿಕ್ಷಕರ ನಡುವೆ ನಡೆದ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತ ಮುಕ್ತ ಸಂವಾದ, ಮತ್ತು ಅಷ್ಟೇ ಮುಖ್ಯವಾಗಿ ಮುಂಜಾನೆ ಮತ್ತು ಸಂಜೆಗಳಲ್ಲಿ ವಸಂತವಿಹಾರದ ಆವರಣದಲ್ಲಿ ನಾವು ನಡೆಸುತ್ತಿದ್ದ ಏಕಾಂಗಿ ಸಂಚಾರಗಳಲ್ಲಿ ಕಣ್ಣೆದುರು ತೆರೆದುಕೊಳ್ಳುತ್ತಿದ್ದ ನಿಸರ್ಗ ವೈಭವ, ಅಡ್ಯಾರಿನ ಥಿಯಸಾಫಿಕಲ್ ಸೊಸೈಟಿಯ ಆವರಣದ ಮಹಾ ವೃಕ್ಷಗಳು, ಸಮುದ್ರದ ದಂಡೆಯಲ್ಲಿ ಕಾಣುತ್ತಿದ್ದ ಅಲೆಗಳ ಮೇಳ ಇವೆಲ್ಲ ಸೇರಿ ಸಹಬಾಳುವೆಯ ಭಾವವನ್ನು ಪ್ರಚೋದಿಸುತ್ತಿದ್ದವು.

ಮನುಷ್ಯ ಕುಲವು ತತ್ ಕ್ಷಣದಲ್ಲಿ ಸ್ವ-ವಿನಾಶದತ್ತ ಸಾಗುತ್ತಿದೆಯೇ? ಜಗತ್ತು ಅವನತ ಮುಖಿಯಾಗಿದೆ ಎಂಬುದು ನಿಜ, ಇಂಥ ಹೊತ್ತಿನಲ್ಲಿ ನಾವೇನು ಮಾಡಬೇಕು? ಭಯ, ಹಿಂಸೆ, ವೇದನೆಗಳ ಮನುಷ್ಯ ಪ್ರಜ್ಞೆಯ ನದಿಯಾಚೆಗೆ ಹೆಜ್ಜೆ ಇಟ್ಟು ಸಾಗುವುದು ಎಂದರೇನು ಅರ್ಥ? ಮನಸ್ಸಿನಲ್ಲಿರುವ ಕಾಮನೆಗಳ ಬಗ್ಗೆ ನಾವೇನು ಮಾಡಬೇಕು? ನಮ್ಮ ಬದುಕಿನ ಸುಳ್ಳು ಸಂಗತಿಗಳನ್ನು ಬಿಟ್ಟುಬಿಡುವುದಕ್ಕೆ ಆಗುವುದಿಲ್ಲವೇಕೆ? ಕ್ರಿಯೆಯಲ್ಲಿ ತೊಡಗುವುದೆಂದರೇನು? ಕರುಣೆಯೊಡನೆ ಬದುಕುವುದೆಂದರೇನು? ಒಳಿತಿನಲ್ಲಿ, ಒಳ್ಳೆಯತನದಲ್ಲಿ ಸ್ಥಿರವಾಗಿರುವುದು ಎಂದರೇನು? ಇವು ಈ ಸಮಾವೇಶದಲ್ಲಿ ಚರ್ಚಿತವಾದ ಕೆಲವು ಪ್ರಶ್ನೆಗಳು. ಇಂಥ ಅನೇಕ ಪ್ರಶ್ನೆಗಳು, - ಉತ್ತರ ದೊರಕದ ಪ್ರಶ್ನೆಗಳು - ಮನಸ್ಸಿನಲ್ಲಿ ಮೂಡುತ್ತಿದ್ದವು. ಇವುಗಳಿಗೆ ನಾವು ನಮ್ಮ ಜ್ಞಾನದ ವಲಯದಲ್ಲಿಯೇ ಉತ್ತರವನ್ನು ಹುಡುಕುತ್ತ ವಿಫಲರಾಗುತ್ತಿರಬಹುದು; ಇಲ್ಲವೆ ಇವು ನಾವು ಎದುರಿಸಲು ಒಲ್ಲದ ಪ್ರಶ್ನೆಗಳೂ ಆಗಿರಬಹುದು. ಆದರೆ ಈ ಪ್ರಶ್ನೆಗಳು ಅತೃಪ್ತಿಯ ಅಲೆಗಳನ್ನು ಮನಸ್ಸಿನಲ್ಲಿ ಉಳಿಸುವುದು ಮಾತ್ರ ನಿಜ. ಸಮಾವೇಶ ಮುಗಿಯಿತು, ಆದರೆ ಪ್ರಶ್ನೆಗಳು ಉಳಿದವು. ಅವು ಉಳಿದೇ ಇರುತ್ತವೆ. ನಾವು ಸರಿಯಾದ ಪ್ರಶ್ನೆಗಳನ್ನು ಇಟ್ಟುಕೊಂಡೇ ಬದುಕಬೇಕು. ಅರಿಯದ ಪ್ರಶ್ನೆಗಳು ಮಾತ್ರವೇ ನಮ್ಮನ್ನು ಎಲ್ಲ ದುಃಖಗಳಿಂದ ಬಿಡುಗಡೆಗೊಳಿಸುವ ಕಾಲಾತೀತ ತಿಳಿವಳಿಕೆಯತ್ತ ಒಯ್ಯಬಲ್ಲವು.

– ಸುಬು

(ಅನು : ಓ.ಎಲ್.ಎನ್.)

# ಬೆಂಗಳೂರಿನಲ್ಲಿ ಯುವ ಸಮಾವೇಶ

ಬೆಂಗಳೂರು ಶಿಕ್ಷಣ ಕೇಂದ್ರದಲ್ಲಿ, ಡಿಸೆಂಬರ್ 2004ರ ಕೊನೆಯ ವಾರದಲ್ಲಿ ಯುವ ಸಮಾವೇಶ ಜರುಗಿತು. ನಿಮ್ಮ ಬದುಕಿನ ಗತಿ ಏನು? What Are You Doing With Your Life? ಎಂಬುದು ಸಮಾವೇಶದ ಮುಖ್ಯ ಆಶಯವಾಗಿತ್ತು. ಯುವಕರಿಗಾಗಿ ಭಾರತದಲ್ಲಿ ನಡೆದ ಮೊದಲ ಸಮಾವೇಶ ಇದು. ಕಳೆದ ದಶಕದಲ್ಲಿ ಸ್ವಿಟ್ಸರ್‌ಲ್ಯಾಂಡಿನ ಸ್ಯಾನೆನ್ ಎಂಬಲ್ಲಿ ಇಂಥ ಸಮಾವೇಶಗಳು ನಡೆದಿದ್ದವು. ದಿನ ನಿತ್ಯದ ಬದುಕನ್ನು ಎದುರಿಸುವ ''ಅನುಭವಗಳ'' ಆಘಾತಕ್ಕೆ ಒಳಗಾಗಿರದ ಯುವ ಮನಸ್ಸುಗಳನ್ನು ಒಗ್ಗೂಡಿಸುವುದು ಈ ಸಮಾವೇಶಗಳ ಉದ್ದೇಶ.

ಯೌವನವೆಂದರೆ ಬದುಕಿಗಾಗಿ ತಕ್ಕ ಉದ್ಯೋಗವೊಂದನ್ನು ಹುಡುಕಿಕೊಳ್ಳುವ ಸಮಯ. ಇದು ಅನೇಕ ವಿಶಿಷ್ಟ ಸವಾಲುಗಳನ್ನು ಒಡ್ಡುವ ಸಮಯವೂ ಹೌದು. ಗಂಡು ಹೆಣ್ಣಿನೊಡನೆ, ಹೆಣ್ಣು ಗಂಡಿನೊಡನೆ ಹೊಸ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವ ಸಮಯವೂ ಇದೇ. ಹೀಗಾಗಿ ನಿರೀಕ್ಷೆಗಳ, ಬದ್ಧತೆಯ, ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವ ಮುರಿದುಕೊಳ್ಳುವ ವಿಶಿಷ್ಟ ಸವಾಲುಗಳು ಯುವ ಮನಸ್ಸುಗಳಿಗೆ ಇರುತ್ತವೆ. ಕೆಲವರಿಗೆ ಆಧ್ಯಾತ್ಮಿಕ ಆಸಕ್ತಿ ಇದ್ದು ಅನೇಕ ಗುರುಗಳ ಮುಖಾಂತರ ಸತ್ಯದ ಅನ್ವೇಷಣೆಗೆ ತೊಡಗುತ್ತಾರೆ. ಜನಪ್ರಿಯವಾದ ಅನೇಕ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸಿ, ಅತೃಪ್ತರಾಗಿ, ಆಕಸ್ಮಾತ್ತಾಗಿ ಜೆಕೆಯವರ ಯಾವುದೋ ಪುಸ್ತಕವನ್ನು ಓದಿ ಕುತೂಹಲ ಕೆರಳಿರುತ್ತದೆ. ಜೆಕೆ ತಮ್ಮ ಭಾಷಣ, ಸಂವಾದ, ಬರವಣಿಗೆಗಳಲ್ಲಿ ಹೇಳಿರುವ ಸಂಗತಿಗಳನ್ನು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಹೇಗೆಂಬ ಬಲು ಮುಖ್ಯ ಪ್ರಶ್ನೆ ಎದುರಾಗಿರುತ್ತದೆ.

ಈ ಸಮಾವೇಶದಲ್ಲಿ 30 ಮಂದಿ ಭಾಗವಹಿಸಿದ್ದರು. ಅವರುಗಳಲ್ಲಿ ವ್ಯಾಲಿ ಶಾಲೆಯಲ್ಲಿ ಓದಿದ್ದ ವಿದ್ಯಾರ್ಥಿಗಳು, ತರಬೇತಿ ಪಡೆಯುತ್ತಿರುವ ಶಿಕ್ಷಕರು ಸೇರಿದ್ದರು. ಈ ಎಲ್ಲರೂ 17-35ವರ್ಷಗಳ ವಯೋಮಾನದವರು.

**(7ನೇ ಪುಟದಲ್ಲಿ ಮುಂದುವರೆದಿದೆ)**

# ಪತನಶೀಲ ಜಗತ್ತಿನಲ್ಲಿ ಮಾನವನ ಮರುನಿರ್ಮಾಣ

........... ★ ................

'ಪತನಶೀಲ ಜಗತ್ತು' ಎನ್ನುವ ಮಾತಿನ ನಿಜವಾದ ಅರ್ಥವೇನು? ಅದರ ಅರ್ಥದ ಬಗ್ಗೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನಿಸಿಕೆಗಳಿವೆ. ಆದರೆ ಈ ಸಂವಾದದಲ್ಲಿ ಸ್ಪಷ್ಟತೆ ಇರಲಿ ಎಂಬ ಉದ್ದೇಶದಿಂದ, ಈ ಮಾತಿನ ಕೆಲವು ಅರ್ಥಗಳನ್ನು ಸೂಚಿಸಬಹುದು. ಅಂತೆಯೇ ಆ ಅರ್ಥಗಳನ್ನು ಒಪ್ಪಿಕೊಳ್ಳುವುದರ ಪರಿಣಾಮಗಳನ್ನು ಕೂಡ.

**ಆಧುನಿಕ ಮನೋಧರ್ಮ: 'ವ್ಯಕ್ತಿನಿಷ್ಠ ಅಂಶಗಳು'** : ಹೆಚ್ಚುಕಡಿಮೆ ಪ್ರತಿಯೊಂದು ಯುಗವೂ ತನಗಿಂತ ಹಿಂದಿನ ಕಾಲಖಂಡಗಳಿಗೆ ಹೋಲಿಸಿದಾಗ ತಾನು ಪತನಶೀಲವಾಗಿರುವೆನೆಂದೇ ತಿಳಿದುಕೊಂಡಿದೆ. ಈ ಮಾತಿಗೆ ತಾನು ಪ್ರಗತಿ ಪರವೆಂದು ತಿಳಿದುಕೊಂಡಿರುವ ನಮ್ಮ ಆಧುನಿಕ ಕಾಲ ಮಾತ್ರವೇ ಅಪವಾದವಾಗಿದೆ. ಆದರೆ, 'ಆಧುನಿಕ ಪತನಶೀಲತೆ'ಗೆ ತನ್ನದೇ ಆದ ವಿಶಿಷ್ಟ ಲಕ್ಷಣಗಳಿವೆಯೇ? ಈ ಟಿಪ್ಪಣಿಗಳಲ್ಲಿ ಅವುಗಳನ್ನು ಗುರುತಿಸುವ ಪ್ರಯತ್ನವನ್ನ ಮಾಡಲಾಗಿದೆ. (ಮೊದಲ ಭಾಗದಲ್ಲಿ ಅದನ್ನು 'ವ್ಯಕ್ತಿನಿಷ್ಠ' ಬೌದ್ಧಿಕ ನೆಲೆಯಿಂದ ಪರಿಶೀಲಿಸಿದರೆ, ಎರಡನೆಯ ಭಾಗದಲ್ಲಿ ನಮಗೆ 'ದತ್ತವಾಗಿರುವ' 'ವಸ್ತುನಿಷ್ಠ ನೆಲೆ'ಯಿಂದ ನೋಡಲಾಗಿದೆ.

**ಹಿಂಸೆ** : ಮನುಷ್ಯಸಂಬಂಧಗಳಲ್ಲಿ ಸಮತೋಲನ, ಸಮನ್ವಯ ಹಾಗೂ ತಿಳಿವಳಿಕೆಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗದೆ ಇರುವುದು ನಮ್ಮ ಕಾಲದಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡಿರುವ ಸಮಸ್ಯೆಯಾಗಿದೆ. ರಾಜಕೀಯ, ಸಾಮಾಜಿಕ, ವೈಯಕ್ತಿಕ ಎಂಬ ಮೂರು ನೆಲೆಗಳಲ್ಲಿಯೂ ಈ ಮಾತು ನಿಜ. ಅಷ್ಟೇ ಅಲ್ಲ, ಪ್ರಕೃತಿಯೊಂದಿಗೆ ಮನುಷ್ಯನು ಇಟ್ಟುಕೊಂಡಿರುವ ಸಂಬಂಧಗಳ ಪಾಡು ಕೂಡ ಇದಕ್ಕಿಂತ ಭಿನ್ನವಾಗಿಲ್ಲ, ನಿಜ. ಇದುವರೆಗಿನ ಯಾವುದೇ ನಾಗರಿಕತೆಯಾಗಲೀ ಕಾಲಖಂಡವಾಗಲೀ ನೂರಕ್ಕೆ ನೂರರಷ್ಟು ಸಮನ್ವಯ ಸಮತೋಲನಗಳನ್ನು ಕಂಡುಕೊಂಡಿಲ್ಲ, ಆದರೆ, ಯುದ್ಧಗಳಲ್ಲಿ ಹಾಗೂ ಜನಾಂಗಹತ್ಯೆಗಳಲ್ಲಿ ನಮ್ಮ ಕಾಲವು ನಡೆಸಿರುವ ಹಿಂಸೆಯ ಪ್ರಮಾಣವು ಅಭೂತಪೂರ್ವವಾಗಿದೆ. ಆಧುನಿಕಯುಗದಲ್ಲಿ ಪ್ರಕೃತಿಯ ಮೇಲೆ ನಡೆದಿರುವ ದಾಳಿ ಮತ್ತು ಸಮರಗಳು ಇತಿಹಾಸದ ಯಾವುದೇ ಅವಧಿಯಲ್ಲಿ ಇಷ್ಟೊಂದು ಸರ್ವವ್ಯಾಪಕವೂ ಸರ್ವನಾಶಕವೂ ಆಗಿರಲಿಲ್ಲ. ಹೀಗೆಂದರೆ, ನಮ್ಮ ಕಾಲದ ಮನುಷ್ಯರು ಸ್ವಭಾವಸಹಜವಾಗಿಯೇ ಹಿಂದಿನವರಿಗಿಂತ ಕ್ರೂರಿಗಳೆಂದು ಅರ್ಥವಲ್ಲ, ಆದರೆ ಆಧುನಿಕ ಕಾಲದಲ್ಲಿ ಹಿಂಸೆಯ ಉಪಕರಣಗಳು ಹಿಂದೆಂದಿಗಿಂತಲೂ ಪರಿಷ್ಕೃತವಾಗಿ, ಅಪಾರವಾಗಿ ಬೆಳೆದಿವೆ. ಈ ಮಾತಿಗೆ ಸಾಕ್ಷಿಗಳನ್ನು ಹೆಚ್ಚು ದೂರಹೋಗಿ ಹುಡುಕಬೇಕಾಗಿಲ್ಲ, ಚರಿತ್ರೆಯ ಪುಸ್ತಕಗಳಲ್ಲಿ ದಾಖಲೆಯಾಗಿರುವ ಇಪ್ಪತ್ತನೆಯ ಶತಮಾನದ ಹಿಂಸಾಕಾಂಡಗಳನ್ನು ಗಮನಿಸಿದರೆ ಸಾಕು. ಅಷ್ಟೇಕೆ, ದಿನದಿನದ ವರ್ತಮಾನ ಪತ್ರಿಕೆಗಳನ್ನು ಓದಿದರೂ ಈ ಸತ್ಯವು ಕಣ್ಣಿಗೆ ಕಟ್ಟುತ್ತದೆ.

**ಇಂದ್ರಿಯನಿಷ್ಠ ಸಂಸ್ಕೃತಿ** : ಇಂದ್ರಿಯಸುಖಗಳಿಗಾಗಿ ನಡೆಸುವ ಅವಿರತವಾದ, ನಿರ್ದಯವಾದ ಹುಡುಕಾಟವು ನಮ್ಮ ಕಾಲದ ಮೂಲ ಲಕ್ಷಣವಾಗಿಬಿಟ್ಟಿದೆ. ಇಂದ್ರಿಯಾನುಭವಗಳಿಗೆ ಮಾತ್ರವೇ ನಿಷ್ಠವಾದ ಸಂಸ್ಕೃತಿಯು ನಮ್ಮ ಸುತ್ತಲೂ ಬೆಳೆದುನಿಂತಿದೆ. ನಮ್ಮ ಕಾಲವು, ಕಳೆದ ಕಾಲಗಳಿಗಿಂತ 'ದುಷ್ಟ'ವೆಂದೋ 'ಅನೈತಿಕ'ವೆಂದೋ ಭಾವಿಸುವ ಅಗತ್ಯವಿಲ್ಲ, ಆ ಕಾಲಗಳಲ್ಲಿಯೂ ಅವರದೇ ಆದ ಸುಖಭೋಗಲಾಲಸೆಗಳು ಇದ್ದವು. ಆದರೆ ಆಧುನಿಕ ತಂತ್ರಜ್ಞಾನವು ಒದಗಿಸಿಕೊಟ್ಟಿರುವ ಸಂಪನ್ಮೂಲಗಳ ಬಳಕೆಯಿಂದ, ಅಂಥ ಸುಖಗಳನ್ನು ಅಮಿತವಾಗಿ ಪಡೆಯಬಹುದು. ಆ ಸುಖಸಾಧನೆಯ ಮಾರ್ಗಗಳು ಹೆಚ್ಚು ವ್ಯಾಪಕವೂ ಸೂಕ್ಷ್ಮವೂ ಆಗಿಬಿಟ್ಟಿವೆ. ಇಂದ್ರಿಯಸುಖಲೀನತೆ, ಮನರಂಜನೆ ಮತ್ತು ಬೇಸರಪರಿಹಾರಗಳನ್ನು ಬಯಸುವವರಿಗೆ ಆಧುನಿಕ ಕಾಲವು ಲೆಕ್ಕವಿಲ್ಲದಷ್ಟು ಹೊರದಾರಿಗಳನ್ನು ಒದಗಿಸಿಕೊಟ್ಟಿದೆ.

**ಕೊಳ್ಳುಬಾಕ ಸಂಸ್ಕೃತಿ ಅಥವಾ ಅನುಭೋಗೀ ಸಂಸ್ಕೃತಿ** : ಆಕರ್ಷಕವಾದ ಹತ್ತು ಹಲವು ವಿಧಾನಗಳಿಂದ ಗ್ರಾಹಕರ ಇಂದ್ರಿಯಗಳನ್ನು ಕೆರಳಿಸಿ ಮನಸ್ಸನ್ನು ಮೋಹಿತವಾಗಿಸಲು ಆಧುನಿಕ ತಂತ್ರಜ್ಞಾನದ ಅಮಿತಶಕ್ತಿಗೆ ಸಾಧ್ಯವಾಗಿದೆ. ಅಷ್ಟೇ ಅಲ್ಲ, ಆವಶ್ಯಕತೆ ಇರಲಿ ಬಿಡಲಿ, ಕೊನೆಮೊದಲಿಲ್ಲದಷ್ಟು ಸುಖಭೋಗದ ಸಾಮಗ್ರಿಗಳನ್ನು ಉತ್ಪಾದಿಸಿ ಗುಡ್ಡೆಹಾಕಲು ಈ ತಂತ್ರಜ್ಞಾನಕ್ಕೆ ಸಾಧ್ಯವಾಗುತ್ತದೆ. ಸರಿ, ತಯಾರುಮಾಡಿದ ಮೇಲೆ ಮಾರಲೇಬೇಕಲ್ಲ! ಮಾರುವವರು ಇರುವಾಗ ಕೊಳ್ಳುವವರು ಬೇಡವೇ? ಆದ್ದರಿಂದ, ''ನನ್ನ ಮನೆಯು ಸುಖಭೋಗದ ಸಾಮಗ್ರಿಗಳನ್ನು ರಾಶಿಹಾಕುವ ಉಗ್ರಾಣವಾಗಿಬಿಡುತ್ತದೆ. ಅಲ್ಲಿಂದ ಹೊರಗೆ ಹೋಗುವುದೆಂದರೆ, ಇನ್ನಷ್ಟು ವಸ್ತುಗಳನ್ನು ತಂದು ಇರುವುದರ ಜೊತೆಗೆ ಸೇರಿಸಿಕೊಳ್ಳುವುದು.'' ಇಂತಹ ಜೀವನವಿಧಾನವು, ಕೊಳ್ಳುಬಾಕತನವು ಬಹುಬೇಗ ವಿಶ್ವವ್ಯಾಪಿಯಾಗುತ್ತಿದೆ.

**ಹಟಮಾರಿ ಭೌತವಾದ** : ಇಂದ್ರಿಯನಿಷ್ಠ ಸಂಸ್ಕೃತಿಯ ತಳಹದಿಯೆಂದರೆ ಹಟಮಾರಿಯಾದ ಭೌತವಾದವೇ. 'ಅಸ್ತಿತ್ವದ ಭೌತಿಕನೆಲೆ'ಯೊಂದೇ ಸಂಪೂರ್ಣ ಸತ್ಯವೆಂಬ ನಂಬಿಕೆಯು ಈ ವಾದದ ಮೂಲ. ಆಧ್ಯಾತ್ಮಿಕ, ನೈತಿಕ, ಸೌಂದರ್ಯಪರ ಮುಂತಾದ ಇತರ ಎಲ್ಲ ಆಯಾಮಗಳೂ ಈ ಭೌತಿಕನೆಲೆಯ ಉಪ-ಉತ್ಪನ್ನಗಳೆನ್ನುವುದೇ ಇದರ ತಿಳಿವಳಿಕೆ. ಇದರ ಪರಿಣಾಮವಾಗಿ, ಜೀವನದ ಎಲ್ಲ ಸಮಸ್ಯೆಗಳನ್ನೂ ಈ ಹಂತದಲ್ಲಿಯೇ ಪರಿಹರಿಸಿಕೊಳ್ಳಬಹುದೆಂಬ ನಂಬಿಕೆಯು ಹುಟ್ಟಿಕೊಳ್ಳುತ್ತದೆ. ಇಂಥ ದೃಷ್ಟಿಕೋನವು ಜೀವನಕ್ಕೆ ಅರ್ಥವನ್ನು ಕೊಡಬಹುದಾದ ಉನ್ನತ ನೆಲೆಗಳ ಕಡೆಗೆ ತಿರುಗಿನೋಡಲೂ ಇಚ್ಛಿಸುವುದಿಲ್ಲ, ಆದ್ದರಿಂದಲೇ ನಮ್ಮ ಕಾಲದ ಜನರಿಗೆ, ಜೀವನಕ್ಕೆ ದಿಕ್ಕೂ ಇಲ್ಲ, ಅರ್ಥವೂ ಇಲ್ಲ ಎಂದು ತೋರುತ್ತದೆ. ಹಿಂದಿನ ಯುಗಗಳಲ್ಲಿಯೂ ಸಂದೇಹವಾದಿಗಳು, ನಾಸ್ತಿಕರು ಮತ್ತು ಚಾರ್ವಾಕರು ಇದ್ದರು. ಆದರೆ ಗುರಿಯಿಲ್ಲದ ಅಲೆದಾಟವು ನಮ್ಮ ಕಾಲದ ವಿಶಿಷ್ಟ ಲಕ್ಷಣವಾಗಿದೆ. ಈಗ ನಂಬಿಕೆ, ನಾಸ್ತಿಕತೆ, ಸಂದೇಹ ಯಾವುದೂ ಯಾವುದೂ ಮುಖ್ಯವಲ್ಲ, ನಮ್ಮದು ''ಏನೂ ಬೇಕಾದರೂ ನಡೆಯುತ್ತದೆ'' ಎನ್ನುವ ಕಾಲ. ಏಕೆಂದರೆ ನಿಜವಾಗಿ ನೋಡಿದರೆ ಯಾವುದೂ ಮುಖ್ಯವಲ್ಲ, ಯಾವುದು ಹೇಗಿದ್ದರೆ ಯಾರಿಗೇನು?

**ಸಂವೇದನಾರಾಹಿತ್ಯ** : ಗುರಿಯೇ ಇಲ್ಲದ ಈ ಅಲೆದಾಟದಲ್ಲಿ, ನಮ್ಮ ಸುತ್ತಲೂ ನಡೆಯುತ್ತಿರುವ ಆಗುಹೋಗುಗಳ ಬಗೆಗಿನ ಸಂವೇದನೆಯೇ ಮಾಯವಾಗಿಬಿಡುತ್ತದೆ. ಸಾವು, ನೋವು, ನರಳುವಿಕೆ ಯಾವುದರ ಪರಿವೆಯೂ ಇರುವುದಿಲ್ಲ, ಇಂಥ ನಿರ್ಲಕ್ಷ್ಯವೂ ಎಲ್ಲ ಕಾಲಗಳ ಲಕ್ಷಣವೇ. ಆದರೆ ನಮ್ಮ ಕಾಲವು ಇದಕ್ಕೆ ಹೊಸ ಹೊಸ ಆಯಾಮಗಳನ್ನು ಕೊಟ್ಟಿದೆ. ಆಧುನಿಕ ಕಾಲದ ಸುದ್ದಿಮಾಧ್ಯಮಗಳು ಮತ್ತು ಮನರಂಜನಾ ಮಾಧ್ಯಮಗಳ ಕಡೆಗೆ ಕಣ್ಣುಹರಿಸಿದರೆ ಇದು ಮನದಟ್ಟಾಗುತ್ತದೆ. ವೃತ್ತಪತ್ರಿಕೆ, ಆಕಾಶವಾಣಿ, ದೂರದರ್ಶನ, ಚಲನಚಿತ್ರ ಎಲ್ಲ ಕಡೆಯೂ ಅಷ್ಟೆ ಹಿಂಸೆ, ಭಯೋತ್ಪಾದನೆ ಮತ್ತು ಕ್ಷಾಮಡಾಮರಗಳ ಜೊತೆಜೊತೆಯಲ್ಲಿಯೇ ಅತ್ಯಂತ ಕ್ಷುದ್ರವಾದ ಮನಕೆರಳಿಸುವ ಸಂಗತಿಗಳು. ಅಷ್ಟೇಕೆ, ಸಾವಿಗೆ ಇರುವ ಗಾಂಭೀರ್ಯವನ್ನು ತೆಗೆದುಹಾಕಿ ಅದನ್ನು ಅಗ್ಗ ಮಾಡಲಾಗಿದೆ. ನಮ್ಮ ಪಾಲಿಗೆ ಭಯಾನಕ

ದೃಶ್ಯಗಳಿಗೂ ಮನರಂಜನೆಗೂ ನಡುವೆ ಯಾವ ವ್ಯತ್ಯಾಸವೂ ಇಲ್ಲ, ಎರಡೂ ಒಂದೇ ವಾಸ್ತವದ ಎರಡು ಬಗೆಗಳೆಂದು ತಿಳಿಯುವ ಹಂತಕ್ಕೆ ನಾವು ತಲುಪಿದ್ದೇವೆ. ಸ್ವಿಚ್ ಒತ್ತಿ ಬಾಂಬುಗಳ ಮಳೆ ಸುರಿಸುವ ಯುದ್ಧಕಾಂಡವನ್ನು ದೂರದರ್ಶನದ ಪರದೆಯ ಮೇಲೆ ನೋಡುತ್ತೇವೆ ಅಥವಾ ಕ್ರಿಕೆಟ್ ಪಂದ್ಯದ ವರದಿಯನ್ನು ಓದುತ್ತೇವೆ ಅಥವಾ ಭಯೋತ್ಪಾದಕರು ಇತ್ತೀಚೆಗೆ ನಡೆಸಿರುವ ಹಾವಳಿಗಳನ್ನು ಆಕಾಶವಾಣಿಯಲ್ಲಿ ಆಲಿಸುತ್ತೇವೆ. ಇವೆಲ್ಲವೂ ನಮಗೆ ಅಭ್ಯಾಸವಾಗಿ ಬಿಡುತ್ತವೆ. ಪರಿಣಾಮವಾಗಿ ನಮ್ಮಲ್ಲಿ ಉಳಿದಿರುವ ಅಲ್ಪಸ್ವಲ್ಪ ಸಂವೇದನೆಗಳೂ ಸತ್ತುಹೋಗುತ್ತವೆ. ನಾವು ಯಾವುದಕ್ಕೂ ಎಲ್ಲದಕ್ಕೂ ಹೊರಗಿನವರಾಗಿಬಿಡುತ್ತೇವೆ. ಸ್ಪಂದಿಸುವ ಶಕ್ತಿಯನ್ನೇ ಕಳೆದುಕೊಳ್ಳುತ್ತೇವೆ.

**ಆಕ್ರಮಣಶೀಲ ಸ್ಪರ್ಧಾಮನೋಭಾವ :** ಇಲ್ಲೊಂದು ಪರಸ್ಪರ ವಿರೋಧ ಇದೆ. ನಮ್ಮ ಜೀವನವು ಅರ್ಥವನ್ನು ಕಳೆದುಕೊಂಡು ಚುಕ್ಕಾಣಿಯಿಲ್ಲದ ಹಡಗಾಗಿದೆ. ಆದರೆ, ಅತಿಯಾದ ವ್ಯಕ್ತಿವಾದ ಮತ್ತು ಸ್ಪರ್ಧಾಮನೋಭಾವದಿಂದ ನಮಗೆ ಮುಕ್ತಿ ಸಿಕ್ಕಿಲ್ಲ. ಆತ್ಯಂತಿಕವಾದ ವ್ಯಕ್ತಿವಾದವು ನಮ್ಮ ಕಾಲದಲ್ಲಿ ಜೀವನತತ್ವವೇ ಆಗಿ ಪ್ರತಿಷ್ಠಾಪಿತವಾಗಿದೆ. 'ಪ್ರತಿಯೊಬ್ಬ ವ್ಯಕ್ತಿಯೂ ವೈಯಕ್ತಿಕವಾದ ಲಾಭಗಳಿಕೆಯ ಉದ್ದೇಶದಿಂದ ಪ್ರೇರಿತನಾಗಿ ಆ ದಿಕ್ಕಿನಲ್ಲಿ ದುಡಿದರೆ ಅದರ ಪರಿಣಾಮವಾಗಿ ಎಲ್ಲರಿಗೂ ಒಳ್ಳೆಯದಾಗುತ್ತದೆ' ಎನ್ನುವುದೇ ವ್ಯಕ್ತಿವಾದದ ತಿರುಳು. ಇದು ಕೂಡ ಅತ್ಯಾಧುನಿಕವಾದ ಸಿದ್ಧಾಂತ: ಪ್ರತಿಯೊಬ್ಬ ವ್ಯಕ್ತಿಯೂ ಬಹಳ ತೀವ್ರವಾದ ಸ್ಪರ್ಧಾ ಮನೋಧರ್ಮವನ್ನು ಹೊಂದಿದ್ದರೆ, ಅದರ ಫಲವಾಗಿ ಅವನು ಇನ್ನಷ್ಟು ಮತ್ತಷ್ಟು ಕಷ್ಟಪಟ್ಟು ಕೆಲಸ ಮಾಡುತ್ತಾನೆ. ಅದರಿಂದ ಅವನ ಸಾಮರ್ಥ್ಯವು ಹೆಚ್ಚುತ್ತದೆ. ಅದರಿಂದ ಎಲ್ಲರೂ ಶ್ರೀಮಂತರಾಗುತ್ತಾರೆ. ಇದುವರೆಗಿನ ಎಲ್ಲ ಸಂಸ್ಕೃತಿಗಳೂ ದುರಾಸೆಯನ್ನು ಬಹು ದೊಡ್ಡ ಪಾತಕವೆಂದು ಪರಿಗಣಿಸಿದ್ದವು. ಆದರೆ ಇಂದು 'ಲಾಭಗಳಿಕೆಯ ಅಪೇಕ್ಷೆ' ಎಂಬ ಮಾರುವೇಷದಲ್ಲಿ ಅದು ಅಪೇಕ್ಷಣೀಯ ಗುಣವಾಗಿದೆ. ಅರ್ಥಯಂತ್ರವನ್ನು ಮುನ್ನಡೆಸುತ್ತಿರುವ ಎಣ್ಣೆಯೇ ಈ ಸಿದ್ಧಾಂತ. 'ಆರ್ಥಿಕ ಮಾನವ' (Economic man) ಎಂದು ಕರೆಸಿಕೊಳ್ಳುವ ವಿಚಿತ್ರ, ನಿಗೂಢ ಪ್ರಾಣಿಯೇ ಆ ಯಂತ್ರದ ಚಾಲಕ. ಅರ್ಥಶಾಸ್ತ್ರಜ್ಞರ ಎಲ್ಲ ವಾದಗಳ ಕೇಂದ್ರಬಿಂದುವೂ ಅವನೇ. ಪ್ರಪಂಚದ ಎಲ್ಲ ಮೂಲೆಗಳಲ್ಲಿಯೂ ಅತ್ಯಂತ ಶ್ರೀಮಂತಿಕೆ ಮತ್ತು ಅತಿ ದಾರುಣ ಬಡತನಗಳು ಅಕ್ಕಪಕ್ಕದಲ್ಲಿಯೇ ಇರುವುದನ್ನು ನೋಡಿದರೆ, ಈ ಸಿದ್ಧಾಂತವು ಎಷ್ಟು ಹುಸಿಯೆಂದು ಗೊತ್ತಾಗುತ್ತದೆ. ಇಷ್ಟೆಲ್ಲ ವಾಸ್ತವತೆಗಳ ನಡುವೆಯೂ ಆಕ್ರಮಣಶೀಲ ಸ್ಪರ್ಧಾತ್ಮಕತೆಯು ಪ್ರಪಂಚದ ತುಂಬ ಹರಡಿಕೊಂಡಿದೆ. ಇತರ ಫಲವಾದ ಆದಿ ಅಂತ್ಯಗಳಿಲ್ಲದ ಸಂಘರ್ಷಗಳನ್ನು 'ಸಹಜ ಜೀವನ'ದ ಭಾಗವೆಂದೇ ತಿಳಿಯಲಾಗುತ್ತದೆ.

*(ಮುಂದುವರಿಯುತ್ತದೆ)*

ಲೇಖಕರು: **ಶ್ರೀ ಓ.ಆರ್.ರಾವ್,**

ಟ್ರಸ್ಟೀ, ಕೃಷ್ಣಮೂರ್ತಿ ಫೌಂಡೇಷನ್, ಇಂಡಿಯಾ

*(ಇದು ಲೇಖಕರು ಚೆನ್ನೈನ ಗ್ಯಾದರಿಂಗ್‌ನಲ್ಲಿ ಚರ್ಚೆಗೆಂದು ಮಂಡಿಸಿದ ಬರವಣಿಗೆ.)*

(ಅನು. ಡಾ|| ಎಚ್.ಎಸ್. ರಾಘವೇಂದ್ರ ರಾವ್)

**ಕನ್ನಡ ಭಾಷಾಂತರ ಸಮಿತಿ ಸದಸ್ಯರು**

ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, ಡಾ. ವನಮಾಲಾ ವಿಶ್ವನಾಥ್
ಡಾ|| ಎಚ್.ಎಸ್. ರಾಘವೇಂದ್ರರಾವ್
ಡಾ. ಸತೀಶ್ ಇನಾಮದಾರ, ಶ್ರೀ ಕೆ.ಜಿ. ಕುಲಕರ್ಣಿ

## ಪ್ರಕಟಣೆ

ಈ ವರ್ಷ ಕೃಷ್ಣಮೂರ್ತಿಯವರ ಐದು ಅನುವಾದಿತ ಕನ್ನಡ ಪುಸ್ತಕಗಳನ್ನು ಏಪ್ರಿಲ್ 2, 2005ರಂದು ಶನಿವಾರ, ಬಿಡುಗಡೆ ಮಾಡುವುದಾಗಿ ನಿರ್ಧರಿಸಲಾಗಿದೆ.

ಸ್ಥಳ : **'ಯವನಿಕಾ' ಸಭಾಗೃಹ,**
ಎರಡನೆಯ ಮಹಡಿ, ನೃಪತುಂಗ ರಸ್ತೆ,
(ರಿಸರ್ವ್ ಬ್ಯಾಂಕ್ ಪಕ್ಕದಲ್ಲಿ), ಬೆಂಗಳೂರು.

ಸಮಯ : ಸಾಯಂಕಾಲ 6 ಗಂಟೆ.

ಈ ಸಮಾರಂಭವು

**ಮಾನ್ಯ ಶ್ರೀ ಟಿ.ಎನ್. ಚತುರ್ವೇದಿಯವರು**
ರಾಜ್ಯಪಾಲರು, ಕರ್ನಾಟಕ ರಾಜ್ಯ
ಹಾಗೂ
**ಮಾನ್ಯ ಪ್ರೊ|| ಯು.ಆರ್. ಅನಂತಮೂರ್ತಿ,**
(ಸುಪ್ರಸಿದ್ಧ ಕನ್ನಡ ಸಾಹಿತಿಗಳು ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತರು)

ಇವರ ಉಪಸ್ಥಿತಿಯಲ್ಲಿ ಜರುಗಲಿದೆ. ಪುಸ್ತಕ ಬಿಡುಗಡೆಯ ನಂತರ, ಕೃಷ್ಣಮೂರ್ತಿಯವರ ಭಾವಚಿತ್ರ ಹಾಗೂ ಅವರ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಇದ್ದು, ಅವು ಶನಿವಾರ ಹಾಗೂ ರವಿವಾರ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿವೆ.

**ಸರ್ವರಿಗೂ ಆದರದ ಸ್ವಾಗತ**

## ಬೇಕಾಗಿದ್ದಾರೆ

ಬೆಂಗಳೂರು ಶಿಕ್ಷಣ ಕೇಂದ್ರ (ಕೆ.ಎಫ್.ಐ) ಅಧ್ಯಯನ ಕೇಂದ್ರದಲ್ಲಿ, ಕನ್ನಡ ಹಾಗೂ ಇಂಗ್ಲೀಷ್ ಬಲ್ಲ ಕಂಪ್ಯೂಟರ್ ಮಾಹಿತಿ ಇರುವ ತರುಣ / ತರುಣಿಯ ಅವಶ್ಯಕತೆ ಇದೆ.

ಕೇಂದ್ರದಿಂದ ಪ್ರಕಟಗೊಳ್ಳುವ ಪುಸ್ತಕಗಳ ಮಾರಾಟ, ಕನ್ನಡ ತ್ರೈಮಾಸಿಕ ವಾರ್ತಾಪತ್ರ (ಸಹಪಯಣ)ದ ಸಂಪಾದನೆ ಹಾಗೂ ಹಂಚಿಕೆ ವ್ಯವಸ್ಥೆ, ಇಲ್ಲಿನ ಅತಿಥಿಗೃಹಗಳ ಮೇಲ್ವಿಚಾರಣೆ, ವಾಚನಾಲಯದಲ್ಲಿಯ ಪುಸ್ತಕ ಹಾಗೂ ಧ್ವನಿ ಸುರುಳಿಗಳ ಉಸ್ತುವಾರಿ ಇತ್ಯಾದಿ ಕೆಲಸಗಳನ್ನು ನೋಡಿಕೊಂಡು ಹೋಗುವುದಿದೆ. ಕೇಂದ್ರದಲ್ಲಿಯೇ ಇರುವುದಾದಲ್ಲಿ ವಸತಿ, ಊಟ, ಉಪಹಾರದ ವ್ಯವಸ್ಥೆ ಇದೆ. ಪಟ್ಟಣದಿಂದ ಬೆಳಿಗ್ಗೆ ಬಂದು ಸಂಜೆ ಹೋಗುವುದಾದಲ್ಲಿ ವಾಹನ ಸೌಕರ್ಯ ಕಲ್ಪಿಸಿಕೊಡಲಾಗುವುದು.

ಸಂಬಳ ಇತ್ಯಾದಿಗಳ ವಿಷಯವಾಗಿ, ಸಮಕ್ಷಮ ಸಂದರ್ಶನದಲ್ಲಿ ಚರ್ಚಿಸಬಹುದಾಗಿದೆ.

ಆಸಕ್ತರು ತಮ್ಮ ಶಿಕ್ಷಣ, ಆಸಕ್ತಿ ಹಾಗೂ ಇತರ ವೈಯಕ್ತಿಕ ವಿವರಗಳೊಂದಿಗೆ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.

**Incharge,**
Krishnamurti Study Centre (KFI)
Kanakapura Road, Thathaguni P.O.
Bangalore - 560 062
Ph : 080-28435243

# ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ

(ದಿ ಸ್ಟಡಿ, ಬೆಂಗಳೂರು ಶಿಕ್ಷಣ ಕೇಂದ್ರ, ದೂರವಾಣಿ : ೦೮೦ – ೨೮೪೩೫೨೪೩, ಇ-ಮೇಲ್ : kfistudy@vsnl.com)

## ಕನ್ನಡ ಸಮಾವೇಶ - 2005

ಮಾನ್ಯರೆ,

ಕೃಷ್ಣಮೂರ್ತಿ ಫೌಂಡೇಶನ್ನಿನ, ಅಧ್ಯಯನ ಕೇಂದ್ರವು ಆಯೋಜಿಸಿದ, ಕನ್ನಡ ಸಮಾವೇಶಕ್ಕೆ ತಮಗೆಲ್ಲ ಆದರದ ಸ್ವಾಗತ. ಪ್ರವೇಶ ಶುಲ್ಕವು ಊಟ, ಉಪಹಾರ, ಸಮಾವೇಶದ ಸಾಹಿತ್ಯ-ಸಲಕರಣೆ, ವಸತಿ ಹಾಗೂ ವಾಹನ ಸೌಕರ್ಯ ಇವುಗಳನ್ನು ಒಳಗೊಂಡಿರುತ್ತದೆ.

ಸಮಾವೇಶದ ಚರ್ಚೆಯ ವಿಷಯ : **ಬದುಕಿನ ಸಮಸ್ಯೆಗಳು ಮತ್ತು ಬದಲಾವಣೆಯ ತುರ್ತು**

(ಚರ್ಚೆಯು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ನಡೆಯುತ್ತದೆ)

| | | |
|---|---|---|
| ಸ್ಥಳ | : | ವ್ಯಾಲಿ ಶಾಲೆಯ ಆವರಣ |
| ದಿನಾಂಕ | : | 15-17 ಏಪ್ರಿಲ್, 2005 |
| ಸಮಯ | : | ಬೆಳಿಗ್ಗೆ 10.00 ಗಂಟೆಯಿಂದ ಆರಂಭ |
| **ಪ್ರವೇಶ ಶುಲ್ಕ** | | |
| ಸ್ಥಳೀಯರಿಗೆ | : | ರೂ. 375/- (ಮಧ್ಯಾಹ್ನದ ಊಟ, ಚಹ ಮತ್ತು ವಾಹನ ಸೌಕರ್ಯ ಸೇರಿ) |
| ಇತರರಿಗೆ | : | ರೂ. 750/- (ಊಟ, ಉಪಹಾರ, ವಸತಿ ಹಾಗೂ ವಾಹನ ಸೌಕರ್ಯ) |
| **ವಾಹನ ಸೌಕರ್ಯ** | | |
| ಸ್ಥಳೀಯರಿಗೆ (ಮೂರು ದಿನ) | : | ಬೆಳಗಿನ 8.30ಕ್ಕೆ ಜಯನಗರದ 4ನೇ ಬ್ಲಾಕ್ ಜೈನ ಮಂದಿರದಿಂದ ಹಾಗೂ ವಾಪಾಸ್ಸು ಅಲ್ಲಿಗೇ ಸಂಜೆ 6 ಗಂಟೆಗೆ |
| ವಸತಿ ಸೌಕರ್ಯ ಹೊಂದಿದವರಿಗೆ | : | ದಿನಾಂಕ 14ರಂದು ಸಂಜೆ 5.30 ಗಂಟೆಗೆ ಮತ್ತು ದಿನಾಂಕ 15ರಂದು ಬೆಳಿಗ್ಗೆ 8.30 ಗಂಟೆಗೆ ಜಯನಗರದ 4ನೇ ಬ್ಲಾಕ್ ಜೈನ ಮಂದಿರದಿಂದ ಬಸ್ಸಿನಲ್ಲಿ ಕರೆತರಲಾಗುವುದು. ಹಾಗೆಯೇ ದಿನಾಂಕ 17ರಂದು ಸಂಜೆ 6 ಗಂಟೆಗೆ ಮತ್ತು ದಿನಾಂಕ 18ರಂದು ಬೆಳಿಗ್ಗೆ 7 ಗಂಟೆಗೆ ವಾಪಸ್ಸು ಕರೆದುಕೊಂಡು ಹೋಗಲಾಗುವುದು |

ಈ ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುವವರು ಪ್ರವೇಶಪತ್ರವನ್ನು ಸರಿಯಾಗಿ ತುಂಬಿ, ಹಣವನ್ನು **Bangalore Education Centre, KFI, payable at Bangalore** ಈ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸಬೇಕಾಗಿ ವಿನಂತಿ.

## ಅರ್ಜಿ

(ಒಂದಕ್ಕಿಂತ ಹೆಚ್ಚಿನ ಪ್ರತಿಗಳು ಬೇಕಾದಲ್ಲಿ ದಯವಿಟ್ಟು ಜೆರಾಕ್ಸ್ ಮಾಡಿಸಿ.)

ಮಾನ್ಯರೇ,

ನಾನು, ಬೆಂಗಳೂರಿನಲ್ಲಿ ಆಯೋಜಿಸಿರುವ ಕೃಷ್ಣಮೂರ್ತಿ ಕನ್ನಡ ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುತ್ತೇನೆ. ಪ್ರವೇಶ ಪತ್ರದೊಂದಿಗೆ ಕೆಳಕಂಡ ಡಿಮಾಂಡ್ ಡ್ರಾಫ್ಟನ್ನು ಲಗತ್ತಿಸಲಾಗಿದೆ.

ಹೆಸರು : ______________________ ವಯಸ್ಸು : __________ ಪುರುಷ / ಸ್ತ್ರೀ __________

ವಿಳಾಸ : ______________________________________________

______________________________________________

ದೂರವಾಣಿ : ______________________ ಇ-ಮೇಲ್ : ______________________

ಡಿ.ಡಿ. ನಂ. : ______________________ ದಿನಾಂಕ : ______________________

ಬ್ಯಾಂಕಿನ ಹೆಸರು : ______________________ ರೂ. : ______________________

ಆಗಮನ : ದಿನಾಂಕ : __________ ಸಮಯ __________ ನಿರ್ಗಮನ ದಿನಾಂಕ : __________ ಸಮಯ __________

ದಯವಿಟ್ಟು ಪ್ರವೇಶ ಪತ್ರವನ್ನು ಸರಿಯಾಗಿ ತುಂಬಿ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.
(ಅರ್ಜಿಯನ್ನು ಕಳುಹಿಸಲು ಕೊನೆಯ ದಿನಾಂಕ : 1-4-2005. ರದ್ದುಪಡಿಸಿದಲ್ಲಿ ಶೇ. 20ರಷ್ಟು ಕಡಿತ ಮಾಡಲಾಗುವುದು. ಯಾವುದೇ ರೀತಿಯ ವರ್ಗಾವಣೆ ಇಲ್ಲ.)

ದಿನಾಂಕ :

(ಸಹಿ)

**ಸಂಯೋಜಕರು : ಕೃಷ್ಣಮೂರ್ತಿ ಕನ್ನಡ ಸಮಾವೇಶ, ಬೆಂಗಳೂರು.**

**ದಿ ಸ್ಟಡಿ (The Study),**

**ಬೆಂಗಳೂರು ಶಿಕ್ಷಣ ಕೇಂದ್ರ (KFI) ತಾತಗುಣಿ ಅಂಚೆ, ಬೆಂಗಳೂರು - 560 062.** ದೂರವಾಣಿ : ೦೮೦ – ೨೮೪೩೫೨೪೩.

# Krishnamurti Foundation India

The Study, Bangalore Education Centre

## KANNADA GATHERING - 2005

## Theme - "Problems of Living and the Urgency of Change"

Dear Sir / Madam,

You are invited to participate in a gathering organised by The Study, Bangalore, starting at 10.00 am 15th April 2005 and ending at 5.30 pm, 17th April 2005. The gathering fees covers the cost of meals, reading material, transportation and accommodation where applicable. The medium of communication will be Kannada and English.

| | | |
|---|---|---|
| Venue | : | Valley School Campus |
| Date | : | 15 to 17, April 2005 |
| Time | : | 10.00 a.m. onwards |
| **Registration** | | |
| Day Participants | : | Rs. 375/- per person (inclusive of lunch, tea & transportation) |
| Resident participants | : | Rs. 750/- per person (inclusive of meals, tea, transportation, & accommodation.) |
| **Transportation** | | |
| Day Participants (all 3 days) | : | Pickup at 8.30 a.m. from Jain Temple, Jayanagar 4th Block and return from Gathering venue at 6 pm |
| Resident Participants | : | Pickup on 14th April at 5.30 p.m. and on 15th April at 8.30 a.m.from Jayanagar 4th Block, near Jain Temple. Participants will depart by 17 April at 6 p.m. or 18th April at 7 a.m. |

Those interested may return this form duly filled in with D.D. towards participation fee, drawn in favour of **Bangalore Education Centre, KFI, payable at Bangalore.**

---

## Registration Form

(Please photocopy this form if you need more copies)

Dear Sir,

I wish to attend the Krishnamurti Kannada Gathering at Bangalore. Kindly find the D.D. enclosed with the application.

Name : ______________________ Age : __________ Sex : ______

Address : ______________________________________________

________________________________________________________

Telephone No. : ____________________ E-mail : ______________

Demand Draft No. : __________________ Dated : ______________

Name of the Bank : __________________ Drawn on : ___________

For Rs. : _______________________________________________

Arrival : Date / Time ________________ Departure : Date / Time ____________

Kindly fill in this form and forward to the address given below : (Last date for receipt of application : 1-04-2005. Cancellation fee 20% will be deducted. Registration Non transferable)

Date : (Signature)

**Co-ordinator: Krishnamurti Kannada Gathering – 2005**

**THE STUDY**

Bangalore Education Centre (KFI) Thataguni Post, Bangalore - 560 062. Ph. : 080 - 28435243 E-mail : kfistudy@vsnl.com

*(2ನೇ ಪುಟದಿಂದ ಮುಂದುವರೆದಿದೆ)*

ಅವರಲ್ಲಿ ಅನೇಕರ ಪಾಲಿಗೆ ಜೆ.ಕೆ.ಯವರ ಬೋಧನೆ ಹೊಸದಾಗಿತ್ತು. ಬಹಳಷ್ಟು ಜನ ಕರ್ನಾಟಕದವರೇ ಆದರೂ ಇಬ್ಬರು ಮುಂಬೈನಿಂದ, ಇಬ್ಬರು ಯೂರೋಪಿನಿಂದ, ಇಬ್ಬರು ಆಸ್ಟ್ರೇಲಿಯಾದಿಂದ ಬಂದಿದ್ದರು. ಅವರೆಲ್ಲರ ಹಿನ್ನೆಲೆಯೂ ಬೇರೆಬೇರೆಯಾಗಿತ್ತು. ಅಧ್ಯಾಪಕರು, ಸಾಫ್ಟ್‌ವೇರ್ ಇಂಜಿನಿಯರ್, ನರ್ಸ್, ಹೀಗೆ ಬೇರೆ ಬೇರೆ ಉದ್ಯೋಗಗಳಲ್ಲಿದ್ದರು.

ಈ ಸಮಾವೇಶ ಏಳು ದಿನಗಳ ಕಾಲ ನಡೆಯಿತು. ಎಲ್ಲರೂ ಬೆಂಗಳೂರು ಶಿಕ್ಷಣ ಕೇಂದ್ರದಲ್ಲಿ ಉಳಿದಿದ್ದರು.

*ಭಾಗವಹಿಸಿದ್ದ ಕೆಲವರ ಅಭಿಪ್ರಾಯಗಳು*

- ತಮ್ಮ ಆಸಕ್ತಿಯ ವಿಷಯವನ್ನು ಗಹನವಾಗಿ, ಸೀರಿಯಸ್ ಆಗಿ ಪರಿಶೀಲಿಸುವ ಜನರ ಗುಂಪು ಹೀಗೆ ಕಲೆಯುವುದು ಅಪರೂಪ.
- ವಾತಾವರಣ ಪ್ರಶಾಂತವಾಗಿದೆ. ಪ್ರಶ್ನೆಗಳನ್ನು ಪರಿಶೀಲಿಸಲು ಬೇಕಾದ ಸಮಯ ಮತ್ತು ವಿಶಾಲ ಅವಕಾಶ ದೊರೆತಿದೆ. ನಮ್ಮ ಮನೆಗಳಿಗೆ, ಪರಿಚಿತ ವಾತಾವರಣಕ್ಕೆ ಹಿಂದಿರುಗಿದ ಮೇಲೆ ಇದೇ ಮನಃಸ್ಥಿತಿಯನ್ನು ಕಾಯ್ದುಕೊಳ್ಳಲು ಆಗುತ್ತದೆಯೇ ಎಂಬ ಬಗ್ಗೆ ಅನುಮಾನಗಳಿವೆ.
- ಇದುವರೆಗೆ ನಾನು ಕ್ಷಣ ಕ್ಷಣದ ಭಾವುಕ ಪ್ರತಿಕ್ರಿಯೆಗಳನ್ನು ನೀಡುತ್ತ ಬದುಕುತ್ತಿದ್ದೆ. ಈಗ ಕೊಂಚ ಸಾವಧಾನವಾಗಿ ಬದುಕುವುದನ್ನು, ಭಾವನಾತ್ಮಕ ಪ್ರತಿಕ್ರಿಯೆಗಳ ಮೂಲವನ್ನು ಗಮನಿಸುವುದನ್ನು ಕಲಿಯುತ್ತಿದ್ದೇನೆ. ಕೋಪ, ದುರಾಸೆ, ಅಸೂಯೆಗಳು ಹೇಗೆ ತಲೆಯೆತ್ತುತ್ತವೆ ಎಂಬುದನ್ನು ಪರಿಶೀಲಿಸಿಕೊಳ್ಳಲು ಕಲಿಯುತ್ತಿದ್ದೇನೆ.
- ನಾನು ಮನೆಯನ್ನು ಬಿಟ್ಟು ದೂರವಿದ್ದದ್ದು ಇದೇ ಮೊದಲ ಬಾರಿ. ಇದೇ ಮೊದಲ ಬಾರಿಗೆ ನಾನು ಸಂಪೂರ್ಣವಾಗಿ ರಿಲ್ಯಾಕ್ಸ್ ಆಗಿದ್ದೇನೆ. ಈ ಒಂದು ವಾರದಲ್ಲಿ ಅನೇಕ ಹೊಸ ಸಾಧ್ಯತೆಗಳನ್ನು ಕಂಡುಕೊಂಡಿದ್ದೇನೆ. ನೀವು ಈ ಕಾರ್ಯಕ್ರಮವನ್ನು ನಡೆಸಿದಾಗಲೆಲ್ಲ ಬಂದು ಭಾಗವಹಿಸಲು ಬಯಸುತ್ತೇನೆ.

***ಈ ಒಂದು ವಾರದಲ್ಲಿ ಪರಿಶೀಲಿಸಿದ ಕೆಲವು ಪ್ರಶ್ನೆಗಳು***

- ನಮ್ಮ ಎಲ್ಲ ಕ್ರಿಯೆ ಮತ್ತು ಆಲೋಚನೆಗಳಲ್ಲಿ ನಾನು ಎಂಬುದರ ಚಲನೆ ಇದ್ದೇ ಇರುತ್ತದೆ. ಆ ನಾನು ಎಂಬುದೇನು?
- ನಮ್ಮ ಉದ್ಯೋಗವನ್ನೋ ಕೆರಿಯರನ್ನೋ ಆಯ್ದುಕೊಳ್ಳುವಾಗ ಮಾನಸಿಕ ಸುರಕ್ಷಿತತೆಯ ಬಯಕೆ ಅವ್ಯವಸ್ಥೆಯನ್ನು ಹುಟ್ಟಿಸುವುದೇಕೆ?
- ನಮ್ಮ ಕೆಲಸದಲ್ಲಿ ಪ್ಯಾಶನ್ ಅನ್ನು ಕಂಡುಕೊಳ್ಳುವುದೆಂದರೇನು? ತೀವ್ರಭಾವವಿರುವ ಬದುಕು ಎಂದರೇನು? ನಮ್ಮ ಮನಸ್ಸಿನಲ್ಲಿ ತೀವ್ರಭಾವ ಅಥವಾ ಪ್ಯಾಶನ್ ಏಕಿಲ್ಲ?

ಭಾನುವಾರ ಬೆಳಗ್ಗೆ ಕಾರ್ಯಕ್ರಮ ಮುಕ್ತಾಯವಾಯಿತು. ಅಂದು ತಿಂಗಳ ಮೀಟಿಂಗಿಗಾಗಿ ನಗರದಿಂದ ಅರವತ್ತು ಜನ ವ್ಯಾಲಿ ಶಾಲೆಗೆ ಬಂದಿದ್ದರು. ಅವರಲ್ಲಿ ಏಳು ಜನರೊಡನೆ ಒಂದು ಗಂಟೆಯ ಕಾಲ ಯುವಕರು ಪ್ಯಾನಲ್ ಚರ್ಚೆ ನಡೆಸಿದರು. ನಂತರ ಸಮಾವೇಶಕ್ಕೆ ಸೇರಿದ್ದ ಯುವಜನರ ನಡುವೆ ಮುಕ್ತ ಚರ್ಚೆ ನಡೆಯಿತು. ನಮ್ಮ ಮನಸ್ಸಿನಲ್ಲಿ ತೀವ್ರಭಾವ ಏಕಿಲ್ಲ ಎಂಬ ಪ್ರಶ್ನೆಯನ್ನು ಚರ್ಚಿಸಲಾಯಿತು. ಯುವ ಜನರ ಸಮಾವೇಶದಲ್ಲಿ ಏನೇನೆಲ್ಲ ನಡೆಯಿತು ಎಂಬ ಬಗ್ಗೆ ಹಿರಿಯರು ಕುತೂಹಲ ತೋರಿದರು. ಪ್ಯಾನಲ್ ಚರ್ಚೆಯ ನಂತರ ಸಮಾವೇಶದಲ್ಲಿ ಗುಣಾತ್ಮಕತೆ ಇತ್ತು, ಹೊಸತನವಿತ್ತು, ಫ್ರೆಶ್‌ನೆಸ್ ಇತ್ತು ಎಂದು ಅಭಿಪ್ರಾಯಪಟ್ಟರು.

– ನೀತು

(ಅನು : ಓ ಎಲ್.ಎನ್)

## ಮನವಿ

ನಮ್ಮ ವಾರ್ತಾಪತ್ರವನ್ನು ಮೇ 1999ರಿಂದ ಇಲ್ಲಿಯವರೆಗೆ ಉಚಿತವಾಗಿ ಕಳುಹಿಸಲಾಗುತ್ತಿದ್ದ ವಿಷಯ ತಮಗೆಲ್ಲ ವಿದಿತವೇ ಇದೆ. ಆದರೆ ಇತ್ತಲಾಗಿ ಅದನ್ನು ಪ್ರಕಟಗೊಳಿಸುವಲ್ಲಿ ಹಾಗೂ ಅಂಚೆವೆಚ್ಚ ಇತ್ಯಾದಿಗಳು ತುಂಬಾ ಹೆಚ್ಚಾಗಿರುವ ಕಾರಣ ಇನ್ನು ಮುಂದೆ ಉಚಿತವಾಗಿ ಕಳುಹಿಸಲು ಸಾಧ್ಯವಾಗದ ಹಾಗಾಗಿದೆ. ನಮ್ಮ ಆತ್ಮೀಯ ಓದುಗರು, ಆಗಾಗ ಕೊಂಚ ಸಹಾಯಧನವೆಂದು ಅಲ್ಪ ಹಣವನ್ನು ಕಳುಹಿಸುತ್ತಿದ್ದರಾದರೂ ಅದು ಸಾಕಾಗದ ಕಾರಣ ಬರುವ ಮೇ ತಿಂಗಳ 2005ರ ಸಂಚಿಕೆಯಿಂದ, ನಮ್ಮ ಪತ್ರಿಕೆಯನ್ನು ಕೇವಲ ಚಂದಾದಾರರಿಗೆ ಮಾತ್ರ ಕಳಿಸುವುದೆಂದು ನಿರ್ಣಯ ಮಾಡಲಾಗಿದೆ. ಚಂದಾ ಹಣದ ವಿವರ ಈ ಪ್ರಕಾರ ಇದೆ.

ವಾರ್ಷಿಕ ಚಂದಾ ದರ : ರೂ. 20/–
ಪಂಚವಾರ್ಷಿಕ ಚಂದಾ ದರ : ರೂ. 100/–

ಆದ್ದರಿಂದ ಓದುಗರು, ತಮ್ಮ ಚಂದಾಹಣವನ್ನು ಮುಂಗಡವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ – "Bangalore Education Centre, KFI" ಇವರ ಹೆಸರಿನಲ್ಲಿ ತಮ್ಮ ಹೆಸರು, ಪೂರ್ಣ ವಿಳಾಸಗಳನ್ನು ಇದಕ್ಕೆ ಲಗತ್ತಿಸಿರುವ ಫಾರಂನೊಂದಿಗೆ ಕಳುಹಿಸಿ, ಪತ್ರಿಕೆಯು ನಿರಂತರ ತಮಗೆ ತಲುಪುವಂತೆ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇವೆ. ನವೆಂಬರ್ 2004 ಹಾಗೂ ಫೆಬ್ರವರಿ 2005 ಈ ಎರಡು ಸಂಚಿಕೆಗಳನ್ನು ಎಂದಿನಂತೆ ಉಚಿತವಾಗಿ ಕಳುಹಿಸಲಾಗುವುದು.

### ಚಂದಾದಾರರ ನೋಂದಣಿ ಫಾರ್ಮ್

ಹೆಸರು : ______________________

ಪೂರ್ಣ ವಿಳಾಸ : ______________________

______________________

ಚಂದಾ ವಿವರ
ವಾರ್ಷಿಕ ರೂ. 20/–
ಪಂಚವಾರ್ಷಿಕ ರೂ. 100/–

ಡಿಮ್ಯಾಂಡ್ ಡ್ರಾಫ್ಟ್ "Bangalore Education Centre, KFI" ಇವರ ಹೆಸರಿನಲ್ಲಿ / ರೂ. ..............................
ಬ್ಯಾಂಕ್ ............................................................ ನಂ. ......................... ದಿನಾಂಕ : ..............................

ದಿನಾಂಕ : ಚಂದಾದಾರರ ಸಹಿ

**(1ನೇ ಪುಟದಿಂದ ಮುಂದುವರೆದಿದೆ)**

ಆತ್ಮೀಯತೆ ಕಾಣುತ್ತಿತ್ತು. ಇಂತಹ ಸನ್ನಿವೇಶಕ್ಕಾಗಿ ನಾಳೆಯವರೆಗೆ ಕಾಯಬೇಕು. ನಾಳೆ ನಾವುಗಳು ಎಲ್ಲೆಲ್ಲಿ ಇರುತ್ತೇವೆಯೋ? ಒಮ್ಮೊಮ್ಮೆ ನಾಳೆ ಮೋಡ ಅಡ್ಡ ಬಂದುಬಿಟ್ಟರೆ ಅದೂ ಇಲ್ಲ. ಈ ಎಲ್ಲ ಕಾರಣಗಳಿಂದ ಆ ಕ್ಷಣದ ಆನಂದವನ್ನು ಸವಿಯಬೇಕೆಂಬುದು ಅವರ ನಿಲುವಾಗಿತ್ತು.

ಜೆ.ಕೆ. ಸುಮಾರು ಒಂದು-ಒಂದೂವರೆ ಗಂಟೆ ನಿರರ್ಗಳವಾಗಿ ಮಾತನಾಡಿದರು. ಮಧ್ಯೆ ಮಧ್ಯೆ ಅನೇಕ ಸ್ವಾರಸ್ಯಕರ ವಿಷಯಗಳನ್ನು ಹೇಳುತ್ತಿದ್ದರು. ಅದಕ್ಕೆಲ್ಲ ನಾವು ನಗುತ್ತಿದ್ದರೆ ತಕ್ಷಣ ಕೃಷ್ಣಮೂರ್ತಿ 'ಏಕೆ ನಗುತ್ತಿದ್ದೀರಿ? ನಾವು ಎಷ್ಟು ಗಹನವಾದ ವಿಚಾರವನ್ನು ಚರ್ಚಿಸುತ್ತಿದ್ದೇವೆ. ನಿಮಗೆ ಅದು ತಮಾಷೆಯ ಸಂಗತಿ' ಎಂದು ಬೈದು ಬಿಡುತ್ತಿದ್ದರು. ಮತ್ತೆ ನಿಧಾನವಾಗಿ ಆ ವಿಷಯದ ಕುರಿತು ಮಾತು ಶುರು ಮಾಡುತ್ತಿದ್ದರು. ಈ ಮಧ್ಯೆ ಬೀಚಿ 'ಕಿಟ್ಟಪ್ಪ ಈ ಮುದುಕ ಎದ್ದು ಬಂದು ಒದ್ದು ಬಿಡ್ತಾನೆ ನೋಡು' ಎಂದರು. ನಾನು 'ಹಾಗಾದ್ರೆ ಹೊರಟು ಬಿಡೋಣವೇನೂ' ಎಂದೆ. ಅದಕ್ಕೆ ಬೀಚಿ 'ಬೇಡ, ಒದೆಸಿಕೊಂಡೇ ಹೋಗೋಣ' ಎಂದರು. ಆ ದಿನ ಜೆ.ಕೆ. ಅವರ ಮಾತುಗಳು ಯಾರ್‍ಯಾರಿಗೆ ಎಷ್ಟೆಷ್ಟು, ಹೇಗೇಗೆ ಅರ್ಥವಾಯಿತೋ ಬಿಟ್ಟಿತೋ – ಆ ಮಾತು ಬೇರೆ. ಆದರೆ ಕೃಷ್ಣಮೂರ್ತಿಯವರ ವಿಚಾರಗಳನ್ನು ಬುದ್ಧಿಪೂರ್ವಕವಾಗಿ ತೆಗೆದುಕೊಳ್ಳದೆ ಹೃದಯಪೂರ್ವಕವಾಗಿ ಗ್ರಹಿಸಬೇಕು ಎನಿಸಿತು. ಆವರು ಬಳಸುತ್ತಿದ್ದ ಭಾಷೆ ಕೂಡ ಸಾಮಾನ್ಯವಾಗಿ ಇಂಗ್ಲಿಷ್ ಬಲ್ಲವರೂ ಅರ್ಥಮಾಡಿಕೊಳ್ಳಬಹುದಾದ ಸಿಂಪ್ಲೆಸ್ಟ್ ಲಾಂಗ್ವೇಜ್ ಆಗಿತ್ತು. ಯಾವುದಾದರೂ ಕ್ಲಿಷ್ಟವಾದ ಪದಗಳು ಬಂದರೆ, ಆ ಪದದ ಬೇರೆ ಬೇರೆ ಅರ್ಥವನ್ನು ಹೇಳುತ್ತಿದ್ದರು. ಮಧ್ಯೆ ಮಧ್ಯೆ ಅವರು 'ನಿಮಗಿದು ಅರ್ಥವಾಯಿತೇ? ನೀವೂ ನನ್ನ ಜೊತೆಗೆ ಬರುತ್ತಿದ್ದೀರಲ್ಲವೇ? ಅಥವಾ ನಾನು ಎಂಜಿನ್ನಿಲ್ಲದ ರೈಲಿನಂತೆ ಓಡುತ್ತಿಲ್ಲವಷ್ಟೇ? ಎಂದು ಕೇಳುತ್ತಿದ್ದರು. ನಾವು 'ಹೌದು, ಇಲ್ಲ' ಎಂದು ಹೇಳಬೇಕಿತ್ತು. ಹಾಗೆ ಹೇಳದೆ ಅವರು ಮುಂದಿನ ವಾಕ್ಯ ಶುರುಮಾಡುತ್ತಲೇ ಇರಲಿಲ್ಲ. ಹೇಳದಿದ್ದರೆ ಮತ್ತೆ ಬಯ್ಯುತ್ತಿದ್ದರು – 'ಹೌದು ಇಲ್ಲ' ಎಂದು ಹೇಳಲಿಕ್ಕಾಗುವುದಿಲ್ಲವೆ? ಮತ್ತೇಕೆ ಬಂದಿದ್ದೀರಿ ಇಲ್ಲಿಗೆ?' ಎಂದು. ನಾವು ಒಂದು ಕ್ಷಣ ಆ ಕಡೆ ಈ ಕಡೆ ತಿರುಗಿದರೆ ಏನೋ ಕಳೆದುಕೊಳ್ಳುತ್ತಿದ್ದೇವೇನೋ ಎನಿಸುತ್ತಿತ್ತು. ಮತ್ತೆ ಮರುದಿನ, ಅದರ ಮರುದಿನ ಹೀಗೆ ಮೂರು ದಿನ ಕೃಷ್ಣಮೂರ್ತಿ ಉಪನ್ಯಾಸಗಳನ್ನು ಕೊಟ್ಟರು.

*(ಮುಂದುವರಿಯುತ್ತದೆ)*

**ಬೆಳಗೆರೆ ಕೃಷ್ಣಶಾಸ್ತ್ರಿಯವರ ''ಮರೆಯಲಾದೀತೇ?'' ಪುಸ್ತಕದಿಂದ**

## ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

ಬೆಂಗಳೂರಿನ ಕೃಷ್ಣಮೂರ್ತಿ ಶಿಕ್ಷಣ ಕೇಂದ್ರವು ಜೆ.ಕೆ.ಯವರ ಪುಸ್ತಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಹೊಸ ವಿನ್ಯಾಸದೊಂದಿಗೆ ಸುಂದರವಾಗಿ ಪ್ರಕಟಿಸಲು ಆರಂಭಿಸಿದೆ. ಈಗಾಗಲೇ ಬಿಡುಗಡೆಯಾದ ಪುಸ್ತಕಗಳ ಮಾಹಿತಿ ಕೆಳಕಂಡಂತಿದೆ.

೧. **ಧ್ಯಾನ ಚಿಂತನ**
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೬೫/-

೨. **ಹಿಂಸೆಯನ್ನು ಮೀರಿ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೧೨೦/-

೩. **ಶಿಕ್ಷಣ ಮತ್ತು ಜೀವನದ ಅರ್ಥ**
ಅನು. ಪ್ರೊ. ಕು.ಶಿ. ಹರಿದಾಸ ಭಟ್ ರೂ. ೬೦/-

೪. **ಕ್ರಿಯೆ ಮತ್ತು ಸಂಬಂಧ**
ಅನು. ಬಿ.ಎ. ಸನದಿ ರೂ. ೧೫/-

೫. **ಮೊದಲ ಹಾಗೂ ಕೊನೆಯ ಬಿಡುಗಡೆ**
ಅನು. ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ ರೂ. ೧೫೦/-

೬. **ಕಾಲ ಮತ್ತು ಕಾಲರಹಿತ**
ಅನು. ಶ್ರೀಮತಿ ವನಮಾಲಾ ರಂಗನಾಥ ರಾವ್ ರೂ. ೧೦/-

೭. **ಸಂಸ್ಕೃತಿ ಸಂಗತಿ**
ಅನು. ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ ರೂ. ೧೫೦/-

೮. **ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೧೫/-

೯. **ಅನುದಿನ ಚಿಂತನ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೧೬೦/-

೧೦. **ಬಾಳಿಗೊಂದು ಭಾಷ್ಯ**
ಅನು. ಡಾ. ಮಹಾಬಲೇಶ್ವರರಾವ್ ರೂ. ೧೩೦/-

೧೧. **ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೧೨. **ಶಿಕ್ಷಣ ಮತ್ತು ಜೀವನ**
ಅನು. ಡಾ. ಎಚ್.ಎಸ್. ರಾಘವೇಂದ್ರ ರಾವ್ ರೂ. ೬೫/-

೧೩. **ಭಯದಾಚೆಯ ಬದುಕು**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೧೪. **ದುಃಖಕ್ಕೆ ವಿದಾಯ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೫. **ಸಂಘರ್ಷವಿರದ ಬದುಕಿಗಾಗಿ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೬. **ಸಂಬಂಧವೆಂದರೇನು?**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೭. **ಶಿಕ್ಷಣ – ಕೃಷ್ಣಮೂರ್ತಿ ದೃಷ್ಟಿ**
**(ದ್ವಿತೀಯ ಆವೃತ್ತಿ ಅಚ್ಚಿನಲ್ಲಿ)** ಅನು. ಎಸ್.ಡಿ. ಕಾಶೀಕರ

*ಖಾಸಗಿ ಪ್ರಸಾರಕ್ಕಾಗಿ ಮಾತ್ರ*
*(For private circulation only)*

Printed, Published and Owned by:
Dr. Satish R Inamdar
Director
**The Study, Bangalore Education Centre**
Krishnamurti Foundation India
Thatguni Post, Bangalore - 560 062.
Tel.: 080 - 28435243
Editor : Dr. Satish R Inamdar
E-mail : kfistudy@vsnl.com

Printed at : Omkar Offset Printers, # 3/3, 1st Main Road
N.T. Pet, Bangalore - 2. Telefax : 26708186, 26709026
e-mail : omkar@blr.vsnl.net.in Website : www.omkarprinters.com

Book packet containing periodicals.

Price : Single copy Rs. 5/-
Annual Subscription : Rs. 20/-